ಬರುತ್ತಿದ್ದ ಬೈಕಿಗೆ ಅಡ್ಡಾಗಿ...' ಅವನಿಂದ ಮುಂದೆ ಮಾತು ಹೊರಡಲಿಲ್ಲ.

'ಮಗನನ್ನು ಕಳೆದುಕೊಂಡು ನಿನ್ನ ಹೆತ್ತಬ್ಬೆ ಅಪ್ಪ ಎಷ್ಟು ದುಃಖಿಸಿದ್ದಾರೋ ಪೋರಾ, ನೀನು ಏನನ್ನೂ ಹೇಳಲಿಲ್ಲ ಅಥವಾ ನೀನು ಅನಾಥ ಎಂದು ಹೇಳಿದ್ದನ್ನು ನಂಬಿಕೊಂಡು ಸುಮ್ಮನಾಗಿಬಿಟ್ಟಿದ್ದೆ. ಮೂರ್ಖ, ಶತಮೂರ್ಖ. ಹೆತ್ತವರನ್ನು ನೋಯಿಸಬಾರದಪ್ಪ, ಹೋಗು ಹೋಗು...' ಅವತ್ತು ಅಪ್ಪ ಬಂದಾಗ ಇದೇ ರಾಮಣ್ಣ ಹೇಳಿದ ಮಾತು ನೆನಪಾಯಿತು. ಅಂಥಾ ರಾಮಣ್ಣನ ದುಃಖ, ಬಹಳ ದಿನಗಳ ನಂತರ ಹುಟ್ಟಿದ ಸ್ವಂತ ಮಗನನ್ನು ಕಳೆದುಕೊಂಡ ಅಳಲು ಅಳುವಿಗೆ ನಿಲುಕದ್ದಾಗಿತ್ತು. ಏನು ಸಮಾಧಾನ ಮಾಡಲಾದೀತು? ಹಲವು ಸಂದರ್ಭಗಳಲ್ಲಿ ಶಬ್ದ ಅರ್ಥಹೀನವೆನ್ನಿಸಿಬಿಡುತ್ತದೆ. ಸಾವರಿಸಿಕೊಂಡ ರಾಮಣ್ಣನೇ ಹೇಳಿದ: 'ನನ್ನ ಗೋಳು ಇದ್ದದ್ದೇ ಬಿಡು. ನಮಗೆ ಮತ್ತೆ ಮಕ್ಕಳು ಬೇರೆ ಆಗಲಿಲ್ಲ. ಪೂರ್ವಜನ್ಮದ ಕರ್ಮ ಅಂದುಕೊಂಡೆವು. ಈಗ ತಂಗಿಯ ಮಗನೊಬ್ಬನನ್ನು ಸಾಕಿಕೊಂಡಿದ್ದೇವೆ. ಗೋಪಾಲ ಅಂತ ಹೆಸರು. ದೊಡ್ಡ ದೊಡ್ಡ ಹೊಟೇಲುಗಳು ಬಂದು ನಮ್ಮ ಹೊಟೇಲು ವ್ಯವಹಾರಾನೂ ಡಲ್ ಹೊಡೀತು. ನಾನಿರುವಷ್ಟು ದಿನ ಅದು ನಡೆದೀತಷ್ಟೆ. ಸಾಕುಮಗನಿಗು ಈ ಗುದ್ದಾಟ ಬೇಡ ಅಂತ ಅವನನ್ನು ಇಲ್ಲೇ ಸಾಬರೊಬ್ಬರ ಬೈಕ್ ಗ್ಯಾರೇಜಿಗೆ ಕಳಿಸುತ್ತಿದ್ದೇನೆ. ಅಲ್ಲಿ ಕೆಲಸ ಕಲಿತು ಏನಾದರು ಮಾಡಲಿ ತನ್ನ ಹೊಟ್ಟೆಗಾಗುವಷ್ಟಾದರು ಅಂತ. ನನ್ನ ಕತೆ ಮುಗಿಯುವುದಲ್ಲ, ಹೋಗಲಿ ಬಿಡು ಅದೇನು ನೀನಿಲ್ಲಿ?' 'ನಾನೀಗ ಬ್ಯಾಂಕೊಂದರ ತಪಾಸಣಾಧಿಕಾರಿಯಾಗಿ ಬಂದಿದೀನಿ ರಾಮಣ್ಣ, ಎಂಟ್ಹತ್ತು ದಿನ ಇದ್ದೇನು' ಎಂದೆ. 'ನಮ್ಮ ಮನೆಯಲ್ಲಿಯೇ ಉಳಿಯಲು ನಿನಗೆ ಅಡ್ಡಿಯಿಲ್ಲ ಎನ್ನುವುದಾದರೆ...' ಸಂಕೋಚಪಡುತ್ತ ಹೇಳಿದ. ಈತ ಹಾರ್ವರಪೋರ ಭಾರ್ಗವ ಮಾತ್ರವಲ್ಲ, ಒಬ್ಬ ಅಧಿಕಾರಿ, ತನ್ನಂತಹ ಬಡವನಮನೆಯಲ್ಲಿ ಉಳಿದಾನೆಯೋ ಎನ್ನುವ ಹಿಂಜರಿಕೆ ಆತನ ದನಿಯಲ್ಲಿ ವ್ಯಕ್ತವಾಗಿತ್ತು. 'ಉಳಿಯಬಾರದು ಅಂತಿಲ್ಲ ರಾಮಣ್ಣ, ಆದರೆ ಊಟ ಮತ್ತು ವಸತಿ ವ್ಯವಸ್ಥೆಯನ್ನು ಬ್ಯಾಂಕಿನವರೇ ಮಾಡಿರುತ್ತಾರೆ. ನನ್ನ ಕೆಲಸ ಮುಗಿಸಿ ಹೋದ ಮೇಲೂ ರೂಮಿನಲ್ಲಿ ಮಾಡಬೇಕಾದ ಕೆಲಸ ಬಹಳಷ್ಟಿರುತ್ತೆ...' ಎಂದವನು, ಆತನ ಮುಖ ಸಣ್ಣದಾಗುತ್ತಿದ್ದಂತೆ ಮತ್ತೆ, 'ನಾನು ಮರಳುವುದರ ಒಳಗೆ ನಿಮ್ಮ ಮನೆಯಲ್ಲಿ ಒಂದು ದಿನ ಉಳಿದೇ ಹೋಗುವವನು. ಅಕ್ಕನನ್ನು, ನನಗೆ ಎರಡು ವರ್ಷಗಳ ಕಾಲ ತಾಯಿಯಾಗಿದ್ದವಳನ್ನು ನೋಡದೆ ಹೋಗುವವನಾ ಹೇಳು' ಎಂದೆ.

ಬ್ಯಾಂಕ್ ಪ್ಯೂನ್‌ನಿಂದ ಸೂಟ್‌ಕೇಸನ್ನು ತರಿಸಿಕೊಳ್ಳುತ್ತೇನೆಂದು ಹೇಳಿ ಲ್ಯಾಪ್‌ಟಾಪ್ ಇರುವ ಬ್ಯಾಕ್ ಸ್ಯಾಕೊಂದನ್ನು ಹೆಗಲಿಗೇರಿಸಿ ಹೊರಟೆ. ಪರಿಚಿತ ಊರೇ ಆಗಿದ್ದುದರಿಂದ ದಾರಿಯ ನಿರ್ದೇಶನವಂತು ಬೇಕಾಗಿರಲಿಲ್ಲ. ಆವಾಗಿನಂತೆ ಈಗಲೂ ರಾಜರಸ್ತೆಯೇ ಊರಿನ ಸರ್ವಸ್ವವೂ ಆಗಿತ್ತು. ಹಲವಾರು ಮನೆಗಳು ಅಂಗಡಿಗಳಾಗಿ ಮಾರ್ಪಟ್ಟಿದ್ದು, ಚರಂಡಿಯ ಮೇಲೆ ಕಲ್ಲು ಮುಚ್ಚಿ ಫುಟ್‌ಪಾತ್ ಮಾಡಿದ್ದಷ್ಟೆ ಹೊಸ ಬದಲಾವಣೆ ಅನ್ನಿಸಿತು. ಅತ್ತಿತ್ತ ನೋಡುತ್ತ ಮೂವತ್ತೈದು ವರ್ಷದ ಹಿಂದಿನ ಬಾಲಕನ ಕಣ್ಣಿಗೆ ಇದೆಲ್ಲ ಎಷ್ಟು ಖುಷಿ ಕೊಟ್ಟಿರಬಹುದು... ಈಗ ಹೇಗೆ ಸಪ್ಪೆ ಎನ್ನಿಸುತ್ತದೆ ಎಂದುಕೊಳ್ಳುತ್ತ ಘಟ್ಟದಾಚೆಗಿನ ಬ್ಯಾಂಕನ್ನು ತಲುಪುವಾಗ ಸೂರ್ಯ ಪೂರಾ ಬಿಸಿಯಾಗಿದ್ದ.

ಆಕಸ್ಮಿಕಗಳು ಒಟ್ಟೊಟ್ಟಾಗಿಯೇ ಬರುವುದರ ಸಾಕ್ಷಿ ಅಲ್ಲಿತ್ತು. ಬ್ಯಾಂಕಿನ ವ್ಯವಸ್ಥಾಪಕ ಕುರ್ಚಿಯಲ್ಲಿ ಕುಳಿತಿದ್ದವನು ನನ್ನ ಸ್ನೇಹಿತ ರಾಗುವೇ.

ರಾಗು ನಾನು ಒಂದೇ ಬ್ಯಾಚಿನವರು. ನಾನು ಸೊರಬದ ಕಡೆಯವನಾಗಿದ್ದರೆ ಆತ ಚಿಕ್ಕಮಗಳೂರು ಕಡೆಯವನು. ಒಂದು ರೀತಿಯಲ್ಲಿ ಜಿಲ್ಲಾ ಸೆರಗಿನ ಸಂಬಂಧವಾದುದರಿಂದ